ಓ ಎಸ್ 333/2023

ಪಿ ಡಬ್ಲ್ಯೂ : 1

ದಿನಾಂಕ: 24.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಆರ್ ಎಸ್ ವಕೀಲರಿಂದ:**

ನನ್ನ ದೊಡ್ಡಮ್ಮ ಲಕ್ಷ್ಮಮ್ಮ ನವರು ಸುಮಾರು 10-12 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಹನುಮಮ್ಮ ನವರು 2022 ರಲ್ಲಿ ತೀರಿಕೊಂಡಿರುತ್ತಾರೆ. ಹನುಮಮ್ಮ ಮತ್ತು ಲಕ್ಷ್ಮಮ್ಮ ನವರು ಬದುಕಿದ್ದ ಸಮಯದಲ್ಲಿ ಖಾತೆ ಬದಲಾವಣೆಗೆ ತಹಶೀಲ್ದಾರ್ ರವರಿಗೆ ಅರ್ಜಿ ನೀಡಿದ್ದರು. ಅದಕ್ಕೆ ಸಂಬಂದಪಟ್ಟ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ, ಕಾರಣ ನನ್ನ ಹತ್ತಿರ ದಾಖಲಾತಿಗಳು ಇರುವುದಿಲ್ಲ. ನನ್ನ ತಾತನಿಗೆ ನಂಜಯ್ಯ ಅಲಿಯಾಸ್ ನಂಜೇಗೌಡ ಎಂದು ಅಡ್ಡ ಹೆಸರು ಇರುವುದನ್ನು ಸೂಚಿಸಲು ಯಾವುದಾದರೂ ದಾಖಲಾತಿ ಇದೆಯಾ ಎಂದರೆ ಸಾಕ್ಷಿ ಸರ್ವೆ ದಾಖಲಾತಿಗಳಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲಾತಿ ನಾನು ನ್ಯಾಯಾಲಯಕ್ಕೆ ನೀಡಿರುತ್ತೇನೋ ಇಲ್ಲವೋ ಎಂದು ನಮ್ಮ ವಕೀಲರಿಗೆ ತಿಳಿದಿರುತ್ತದೆ ಆದರೆ ನಾನು ಸದರಿ ದಾಖಲಾತಿಯನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ.

ನನ್ನ ತಾತ ನಂಜಯ್ಯ ಅಲಿಯಾಸ್ ನಂಜೇಗೌಡರು ಅವರ ಹೆಸರಿಗೆ ಖಾತೆ ಬದಲಾವಣೆ ಮಾಡಲು ಅರ್ಜಿ ನೀಡಿರುವ ಬಗ್ಗೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ನಂಜಯ್ಯ ಅಲಿಯಾಸ್ ನಂಜೇಗೌಡ ರವರ ಮರಣ ಪ್ರಮಾಣ ಪತ್ರವನ್ನು ನಾನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ನಂಜಯ್ಯ ಅಲಿಯಾಸ್ ನಂಜೇಗೌಡ ರವರ ಹೆಂಡತಿಯ ಹೆಸರು ಮಾಯಮ್ಮ. ಮಾಯಮ್ಮ ನವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಮಾಯಮ್ಮ ನವರನ್ನು ನೋಡಿಲ್ಲ, ನಾನು ಹುಟ್ಟುವ ಮುಂಚೆ ಅವರು ತೀರಿಕೊಂಡಿರುತ್ತಾರೆ. ನಂಜಯ್ಯ ಅಲಿಯಾಸ್ ನಂಜೇಗೌಡ ಮತ್ತು ಮಾಯಮ್ಮ ನವರು ನಾನು ಹುಟ್ಟುವ ಮುಂಚೆ ತೀರಿಕೊಂಡಿರುತ್ತಾರೆ . ಆದ್ದರಿಂದ ಯಾರು ಮೊದಲು ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಖಾತೆ ಬದಲಾವಣೆ ಬಗ್ಗೆ ಮಾಯಮ್ಮ ನವರು ಕಂದಾಯ ಇಲಾಖೆಗೆ ಅರ್ಜಿ ನೀಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನಂಜಯ್ಯ ಅಲಿಯಾಸ್ ನಂಜೇಗೌಡ ಮತ್ತು ಅವರ ಹೆಂಡತಿ ಮಾಯಮ್ಮ ಹಳ್ಳಿಯಲ್ಲಿ ವಾಸವಾಗಿದ್ದರು ಎಂದು ತೋರಿಸಲು ಯಾವುದಾದರೂ ದಾಖಲಾತಿಯನ್ನು ನ್ಯಾಯಾಲಯಕ್ಕೆ ನೀಡಿರುತ್ತೀರಾ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಈ ದಾವೆಯ ಬಗ್ಗೆ ನನ್ನ ವಕೀಲರು ನ್ಯಾಯಾಲಯಕ್ಕೆ ಯಾವ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ ಎನ್ನುವ ಮಾಹಿತಿ ನನಗೆ ಇರುತ್ತದೆ. ನಾನು ನ್ಯಾಯಾಲಯಕ್ಕೆ ನೀಡಿರುವ ದಾಖಲಾತಿಗಳನ್ನು ಗುರುತಿಸಿರುತ್ತೇನೆ ಎಂದರೆ ಸರಿ. ಸದರಿ ದಾಖಲಾತಿಗಳಲ್ಲಿ ನಾನು ನಂಜಯ್ಯ ಅಲಿಯಾಸ್ ನಂಜೇಗೌಡ ಮತ್ತು ಮಾಯಮ್ಮ ನವರ ವಾಸದ ದೃಢೀಕರಣದ ಪತ್ರಗಳನ್ನು ನೀಡಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಅವರ ಮರಣದ ದೃಢೀಕರಣ ಪತ್ರಗಳನ್ನು ಕೂಡ ನೀಡಿರುವುದಿಲ್ಲ ಎಂದರೆ ಸರಿ.

ದಿನಾಂಕ ಃ 25.12.1929 ರಲ್ಲಿ ಕ್ರಯಪತ್ರದಲ್ಲಿ ನಂಜಯ್ಯ ಅಲಿಯಾಸ್ ನಂಜೇಗೌಡ ರವರ ಹೆಸರು ನಮೂದು ಆಗಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಂಜಯ್ಯ ಎಂದು ಆಗಿರುತ್ತದೆ. ಆದರೆ ನಂಜೇಗೌಡ ಎಂದು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಗುರುತಿಸಿದ ದಾಖಲಾತಿಗಳಲ್ಲಿ ನನ್ನ ತಾತನಿಗೆ ಎರಡು ಹೆಸರು ನಂಜಯ್ಯ ಅಲಿಯಾಸ್ ನಂಜೇಗೌಡ ಎಂದು ಇರುವುದನ್ನು ಯಾವುದೇ ದಾಖಲಾತಿಗಳು ಸೂಚಿಸುವುದಿಲ್ಲ ಎಂದರೆ ಸರಿ. ನಾನು ನಂಜಯ್ಯ ಅಲಿಯಾಸ್ ನಂಜೇಗೌಡ ರವರಿಗೆ 3 ಜನ ಹೆಣ್ಣು ಮಕ್ಕಳು ಎಂದು ತೋರಿಸಲು ತಹಶೀಲ್ದಾರ್ ಕಚೇರಿಯಲ್ಲಿ ವಂಶವೃಕ್ಷವನ್ನು ಪಡೆದಿಲ್ಲ.

ದಿನಾಂಕ ಃ 25.12.1929 ರಲ್ಲಿ ಕ್ರಯಪತ್ರಕ್ಕೆ ಯಾರು ಬಿಕಲಂ ಹಾಕಿರುತ್ತಾರೆ, ತಯಾರು ಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿ ವೆಂಕಟೇಗೌಡರು ಓದಿರುವುದು , ಬರೆದಿರುವುದು ಮತ್ತು ಅವರ ಸಾಕ್ಷಿಯಾಗಿರುತ್ತಾರೆ ಎಂದು ಸಹಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನಂಜಯ್ಯ ಅಲಿಯಾಸ್ ನಂಜೇಗೌಡ ರವರ ಹೆಣ್ಣು ಮಕ್ಕಳು ವಡೇಘಟ್ಟ ಗ್ರಾಮದಲ್ಲಿ ವಾಸವಿದ್ದರು ಎಂದು ತೋರಿಸಲು ಯಾವುದಾದರೂ ದಾಖಲಾತಿಗಳನ್ನು ನೀಡಿರುತ್ತೀರಾ ಎಂದರೆ ದಾಖಲಾತಿಗಳನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ವಡೇಘಟ್ಟ ಗ್ರಾಮ ಕುಣಿಗಲ್ ತಾ. ಗೆ ಸಂಬಂದಪಟ್ಟಿರುತ್ತದೆ ಎಂದರೆ ಸರಿ.

ದಿನಾಂಕ ಃ 25.12.1929 ರಲ್ಲಿ ಕ್ರಯಪತ್ರದಲ್ಲಿ ನಮೂದಾಗಿರುವ ಸ.ನಂ. ಯಾವುದು ಎಂದರೆ ಸ.ನಂ. 114/2 ಕಾಳೇರಕಾವಲ್ ಗ್ರಾಮಕ್ಕೆ ಸೇರಿರುತ್ತದೆ. ಸದರಿ ಕ್ರಯಪತ್ರದ ಅಡಿಯಲ್ಲಿ ಹೆಚ್ ರಂಗಯ್ಯ ನವರು ನನ್ನ ನಂಜಯ್ಯ ಅಲಿಯಾಸ್ ನಂಜೇಗೌಡ ರವರಿಗೆ ಮಾರಾಟ ಮಾಡಿರುತ್ತಾರೆ. ಕ್ರಯಪತ್ರದಲ್ಲಿ ಸ.ನ. 114/2 ಎಂದು ನಮೂದಾಗಿರುತ್ತದೆ. ಸಾಕ್ಷಿಯು ಮುಂದುವರೆದು ಸ.ನಂ. 114 ರಲ್ಲಿ 2ನೆ ಭಾಗ ಎಂದು ನಮುದಾಗಿರುತ್ತದೆ ಎಂದು ನುಡಿಯುತ್ತಾರೆ. 1929 ರಲ್ಲಿ ಸ.ನಂ.114/2 ನ್ನು ಮಾರಾಟ ಮಾಡಿದ ಹೆಚ್ ರಂಗಯ್ಯ ನವರ ಹೆಸರಿನಲ್ಲಿ ಪಹಣಿ ಬರುತ್ತಿತ್ತಾ ಎಂದರೆ ಗೊತ್ತಿಲ್ಲ. ನಾನು ದಾವೆ ದಾಖಲು ಮಾಡುವ ಪೂರ್ವ ಮತ್ತು ನಂತರ ಇರುವ ಸ.ನಂ. 114/2 ರ ಪಹಣಿಗಳನ್ನು ಪಡೆದು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೀರಾ ಎಂದರೆ ಇಲ್ಲ.

ಈ ದಾವೆಯನ್ನು ಸ.ನಂ. 114/2 ಕ್ಕೆ ಸಂಬಂದಪಟ್ಟಂತೆ ದಾವೆಯನ್ನು ಹೂಡಿರುತ್ತೀರಾ ಎಂದರೆ ಸಾಕ್ಷಿ ಸದರಿ ಸ.ನಂ. 114/2 ಪೋಡಿಯಾಗಿ ಸ.ನಂ. 263 ಆಗಿದ್ದು, ಅದರ ಮೇಲೆ ನಾನು ಈ ದಾವೆಯನ್ನು ಹೂಡಿರುತ್ತೇನೆ. ಸ.ನಂ. 114/2 ಪೋಡಿಯಾಗಿ ಸ.ನಂ. 263 ಆಗಿದ್ದು ಯಾವ ವರ್ಷದಲ್ಲಿ ಎಂದರೆ ಸಾಕ್ಷಿ 1947 ರಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು 1972 ರಲ್ಲಿ ಹುಟ್ಟಿರುತ್ತೇನೆ. ಸದರಿ ಸ.ನಂ. 114/2 ಪೋಡಿಯಾಗಿ ಸ.ನಂ. 263 ಆಗಿರುವ ವಿಚಾರ 2022 ರಲ್ಲಿ ಗೊತ್ತಾಗಿರುತ್ತದೆ. ಹೆಚ್ ರಂಗಯ್ಯ ನವರಿಗೂ ಮತ್ತು ಸ.ನಂ. 114/2 ಕ್ಕೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಇರುತ್ತದೆ. ಆ ಸ.ನಂ. 114/2 ರ ಸ್ವತ್ತಿನ ಮೇಲೆ ಯಾವುದೇ ಅಧಿಕಾರ ಮತ್ತು ಹಕ್ಕು ಹೆಚ್ ರಂಗಯ್ಯ ನವರಿಗೆ ಇಲ್ಲದೇ ಇರುವುದರಿಂದ ಅವರು ಆ ಸ್ವತ್ತನ್ನು ಮಾರಾಟ ಮಾಡುವ ಅಧಿಕಾರ ಅವರಿಗೆ ಇರಲಿಲ್ಲಎಂದರೆ ಹೆಚ್ ರಂಗಯ್ಯ ನವರಿಗೆ ಇತ್ತು ಎಂದು ನುಡಿಯುತ್ತಾರೆ. ಆ ಕಾರಣಕ್ಕೆ ನಂಜಯ್ಯ ಅಲಿಯಾಸ್ ನಂಜೇಗೌಡ ರವರು ಅವರ ಹೆಸರಿಗೆ ಕ್ರಯಪತ್ರವಾದ ನಂತರ ಖಾತೆ ಬದಲಾವಣೆ ಮಾಡಿಕೊಂಡಿರಲಿಲ್ಲ ಎಂದರೆ ಸಾಕ್ಷಿ ನನ್ನ ತಾತನಿಗೆ ತಿಳುವಳಿಕೆ ಇರಲಿಲ್ಲ ಎಂದು ನುಡಿಯುತ್ತಾರೆ. ಸ.ನಂ. 114/2 ಎಷ್ಟು ಪೋಡಿಗಳು ಇರುತ್ತದೆ ಎಂದರೆ ಸಾಕ್ಷಿ ಅದರಲ್ಲಿ ನೂರಾರು ಪಹಣಿಗಳು ಇರುತ್ತವೆ ಎಂದು ನುಡಿಯುತ್ತಾರೆ. ನಾನು ಸದರಿ ನೂರಾರು ಪೋಡಿಗಳಾಗಿ ಪಹಣಿಗಳಾಗಿರುವುದನ್ನು ನಾನು ನೋಡಿರುತ್ತೇನೆ . ಸ.ನಂ. 114/2 ಮೂಲ ಸರ್ಕಾರಿ ಗೋಮಾಳ ಎಂದರೆ ಸರಿಯಲ್ಲ. ಸಾಕ್ಷಿ ಸ.ನಂ. 114/2 ಮೂಲ ಗೋಮಾಳ ಜಾಗ ಆಗಿತ್ತು ಎಂದು ನುಡಿಯುತ್ತಾರೆ . ಸಾಕ್ಷಿ ಮುಂದುವರೆದು ಹೆಚ್ ರಂಗಯ್ಯ ನವರಿಗೆ ಸರ್ಕಾರ ದವರು ಮಂಜೂರು ಮಾಡಿರುವ ಜಾಗ ಆಗಿರುತ್ತದೆ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಓ

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**